ಓ ಎಸ್ ನಂ 451/2022

ಪಿ. ಡಬ್ಲ್ಯೂ ಃ 1

ದಿಃ 22.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ 5 ರವರ ಪರ ಶ್ರೀ ಎ ಎಂ ಜಿ ವಕೀಲರಿಂದ ಃ

ನನ್ನ ತಾತನ ಹೆಸರು ಈರಗೇತಪ್ಪ. ನನ್ನ ತಂದೆಯ ಹೆಸರು ಸಾಕನಾಗಯ್ಯ. ನನ್ನ ತಾಯಿಯ ಹೆಸರು ಗಂಗಹೊನ್ನಮ್ಮ. ನನ್ನ ತಾಯಿಯ ತಾಯಿ ಹೆಸರು ನನಗೆ ಗೊತ್ತಿಲ್ಲ. ಸ.ನಂ. 100/1 ನನ್ನ ತಾತನ ಆಸ್ತಿಯಾಗಿರುತ್ತದೆ. ಸ.ನಂ. 100/2 ನನ್ನ ತಾತನ ಆಸ್ತಿಯಾಗಿರುತ್ತದೆ. ಸ.ನಂ. 92/2 ಮತ್ತು ಸ.ನಂ. 98 ನನ್ನ ತಾತನ ಆಸ್ತಿಯಾಗಿರುತ್ತದೆ. ಮೇಲೆ ಹೇಳಿದ ಆಸ್ತಿಗಳು ನನ್ನ ತಾತನ ಆಸ್ತಿ ಎಂದು ತೋರಿಸಲು ಕ್ರಯಪತ್ರ ಅಥವಾ ವಿಭಾಗದ ದಸ್ತಾವೇಜುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಯಾವ ಆಧಾರದ ಮೇಲೆ ದಾವಾ ಸ್ವತ್ತುಗಳು ನನ್ನ ತಾತನ ಅಸ್ತಿ ಎಂದು ನಾನು ಹೇಳುತ್ತೇನೆ ಎಂದರೆ ಸಾಕ್ಷಿ ನನಗೆ ಸದರಿ ಸ್ವತ್ತುಗಳಲ್ಲಿ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ.

ನನ್ನ ತಾತನ ಆಸ್ತಿ ಎಂದು ತೋರಿಸಲು ಪಹಣಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಅದು ನಮ್ಮ ತಾತನ ಆಸ್ತಿ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಪಹಣಿಗಳನ್ನು ನಾನು ಪಡೆದಾಗ ಆ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿದಾಗ ನನಗೆ ಗೊತ್ತಾಗಿರುತ್ತದೆ.

ಸ.ನಂ. 100/1 ರಲ್ಲಿ 16 ಗುಂಟೆ ಜಮೀನು ಇರುತ್ತದೆ. ಸ.ನಂ. 100/2 ರಲ್ಲಿ 4 ಗುಂಟೆ ಜಮೀನು ಇರುತ್ತದೆ. ಸ.ನಂ. 98/2 ರಲ್ಲಿ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನಾಗಯ್ಯ ನನ್ನ ದೊಡ್ಡಪ್ಪ. ನರಸಿಂಹಮೂರ್ತಿ ನನ್ನ ದೊಡ್ಡಪ್ಪನ ಮಗ ಇರಬೇಕು. ತಿಮ್ಮನರಸಿಂಹಯ್ಯ ನನ್ನ ಚಿಕ್ಕಪ್ಪನ ಮಗನಾಗಿರುತ್ತಾನೆ.

ಪಹಣಿಗಳಲ್ಲಿ ನನ್ನ ತಾಯಿ ಗಂಗಹೊನ್ನಮ್ಮ ಮತ್ತು ನಾಗಯ್ಯ ನವರು ಹೆಸರು ಹೇಗೆ ಬಂತು ಎಂದರೆ ನನಗೆ ಗೊತ್ತಿಲ್ಲ. ಸ.ನಂ. 98/2 ಮತ್ತು ಸ.ನಂ. 100/1, 100/2 ರ ಪಹಣಿಗಳ ಪ್ರಕಾರ ಎಂ ಆರ್ 36/1995-96 ರಂತೆ ನನ್ನ ತಾಯಿ ಮತ್ತು ನಾಗಯ್ಯ ನವರ ಹೆಸರಿಗೆ ಪಹಣಿಗಳು ಬಂದಿರುತ್ತದೆ

ಎಂದು ಬರೆದಿರುತ್ತದೆ ಎಂದರೆ ಗೊತ್ತಿಲ್ಲ. ಎಂ ಆರ್ 36/1995-96 ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತುಗಳು ನನ್ನ ತಾಯಿ ಮತ್ತು ನನ್ನ ತಾತನಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಮತ್ತು ಇತರೇ ಆಸ್ತಿಗಳನ್ನು ವೀರಕ್ಯಾತಯ್ಯ ನ ಮಗ ರಾಜಣ್ಣ, ಅವರ ಹೆಂಡತಿ ಸುಶೀಲಮ್ಮ, ಅವರ ಮಕ್ಕಳಾದ ಆರ್ ಕೃಷ್ಣಮೂರ್ತಿ ಮತ್ತು ಅವರ ಹೆಂಡತಿ ವೈ ಆರ್ ಲಕ್ಷ್ಮೀದೇವಿ, ಆರ್ ನರಸಿಂಹಮೂರ್ತಿ ಅವರ ಹೆಂಡತಿ ಶ್ರೀಮತಿ ಆರ್ ಮುತ್ತಮ್ಮ , ಆರ್ ಚಿಕ್ಕಣ್ಣ ಮತ್ತು ಅವರ ಹೆಂಡತಿ ಭಾಗ್ಯಮ್ಮ ಮತ್ತು ಶ್ರೀಮತಿ ಲಕ್ಷ್ಮಮ್ಮ ಮತ್ತು ನಾಗಮ್ಮ ರವರು ಈಗಾಗಲೇ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗಪತ್ರದಲ್ಲಿ ನನ್ನ ತಾತನ ಹೆಸರು ಮತ್ತು ನನ್ನ ತಾಯಿಯ ಹೆಸರು ಇರುವುದಿಲ್ಲ ಎಂದರೆ ಇರುತ್ತದೆ. ಸಾಕ್ಷಿ ಮುಂದುವರೆದು ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ.

ವಿಭಾಗಪತ್ರದ ಪ್ರಕಾರ ಮೇಲೆ ಹೇಳಿದ 5 ಜನರ ಹೆಸರಿನಲ್ಲಿ ದಾವಾ ಆಸ್ತಿಗಳ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸಾಕ್ಷಿ ಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗಪತ್ರ ದಿನಾಂಕಃ 29.09.1999 ರಲ್ಲಿ ನೋಂದಣಿ ಕೂಡ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಅದೇ ರೀತಿ ವಿಭಾಗದ ಆಧಾರದ ಮೇಲೆ ಎಂ ಆರ್ 29/1998-99 ರಂತೆ ಖಾತೆ ಕೂಡ ಮೇಲೆ ಹೇಳಿದ 5 ಜನರ ಹೆಸರಿನಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸುತ್ತೇನೆಯೋ ಎಂದರೆ ಸಾಕ್ಷಿ ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳನ್ನು ಅಷ್ಟೇ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ಸ.ನಂ. 100/1 ಸದರಿ ವಿಭಾಗದಲ್ಲಿ ಅರ್ ಚಿಕ್ಕಣ್ಣ ಮತ್ತು ಭಾಗ್ಯಮ್ಮ ನವರ ಹೆಸರಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸ.ನಂ. 100/2 ಇದು ಆರ್ ಕೃಷ್ಣಮೂರ್ತಿ ಮತ್ತು ಲಕ್ಷ್ಮೀದೇವಿ ರವರ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸ.ನಂ. 98/2 ಆರ್ ಕೃಷ್ಣಮೂರ್ತಿ ನರಸಿಂಹಮೂರ್ತಿ, ಸುಶೀಲಮ್ಮ, ಲಕ್ಷ್ಮೀದೇವಿ, ಆರ್ ಎನ್ ಮೂರ್ತಿ ಮತ್ತು ಆರ್ ನಾಗಮ್ಮ ರವರ ಹೆಸರಿಗೆ ಹೋಗಿರುತ್ತದೆ ಎಂದರೆ ಗೊತ್ತಿಲ್ಲ. ನನಗೆ ಆಸ್ತಿಯಲ್ಲಿ ಏನು ಕೊಡದೆ ಇರುವ ಕಾರಣ ನಾನು ದಾವಾ ಸ್ವತ್ತುಗಳಲ್ಲಿ ವಿಭಾಗ ಕೇಳುತ್ತಿದ್ದೇನೆ.

ದಾವಾ ಸ್ವತ್ತುಗಳಲ್ಲಿ ತೋರಿಸಿರುವ ವಿಸ್ತೀರ್ಣ ಬಿಟ್ಟರೆ ಹೆಚ್ಚಿನ ವಿಸ್ತೀರ್ಣ ದಾವಾ ಸ್ವತ್ತುಗಳು

ಇರುವುದಿಲ್ಲ. 1999 ರಲ್ಲಿ ದಾವಾ ಸ್ವತ್ತುಗಳು ವಿಭಾಗವಾಗಿರುತ್ತದೆ, ನನಗೂ ಮತ್ತು ದಾವಾ ಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಯಾರು ಯಾರಿಗೆ ಭಾಗ ಬಂದಿರುತ್ತದೆಯೋ ಅವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವೆಯನ್ನು ಹೂಡುವ ಮೊದಲು ಎಲ್ಲ ದಾಖಲಾತಿಗಳನ್ನು ನೋಡಿ ದಾವೆಯನ್ನು ಹೂಡಿರುತ್ತೇನೆ.

ಶಫೀವುಲ್ಲಾ ಯಾರೆಂದು ನನಗೆ ಗೊತ್ತಿಲ್ಲ. ನನಗೆ ವೇಣುಗೋಪಾಲ್ ಯಾರೆಂದು ಗೊತ್ತಿಲ್ಲ. ವೀರಗಾತಯ್ಯ , ಗಂಗಮ್ಮ , ರಾಜಣ್ಣ ನನ್ನನ್ನು ನೋಂದಣಿ ಮಾಡಿಸುವ ಸಂದರ್ಭದಲ್ಲಿ ಉಪನೋಂದಣಾಧಿಕಾರಿಗಳ ಕಚೇರಿಗೆ ಕರೆದಿದ್ದರು ಎಂದರೆ ಸರಿಯಲ್ಲ. ನೋಂದಣಿಯಾದ ಮೇಲೆ ಅವರು ನನಗೆ ಹೇಳಿದ್ದರಾ ಎಂದರೆ ಹೇಳಿರುವುದಿಲ್ಲ. ನನಗೆ ಈ ವಿಚಾರ ಈ ದಾವೆ ಹೂಡಿದ ನಂತರ ಗೊತ್ತಾಗಿರುತ್ತದೆ. ಈ ದಾವೆಯನ್ನು ಹೂಡಿ ಎಷ್ಟು ವರ್ಷಗಳಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸ.ನಂ. 100/1 ರ ಪಹಣಿ ಈಗ ಯಾರ ಹೆಸರಿನಲ್ಲಿರುತ್ತದೆ ಎಂದರೆ ಗೊತ್ತಿಲ್ಲ. ಸ.ನಂ. 100/1 ರಲ್ಲಿ ಫ್ಯಾಕ್ಟರಿ ಇರುತ್ತದೆ. ನನಗೆ ಸ.ನಂ. 100/1 ರಲ್ಲಿ ಫ್ಯಾಕ್ಟರಿ ಹಾಕಿರುತ್ತಾರೆ ಎಂದು ಈ ದಾವೆಯನ್ನು ಹೂಡಿದ ನಂತರ ಗೊತ್ತಾಗಿರುತ್ತದೆ. ಈ ದಾವೆಯನ್ನು ಹೂಡುವ ಮುಂಚೆ ಫ್ಯಾಕ್ಟರಿ ಇರುವ ವಿಚಾರ ನನಗೆ ಗೊತ್ತಿಲ್ಲ. ಈ ಫ್ಯಾಕ್ಟರಿಯನ್ನು 2006 ರಲ್ಲಿ ಸ್ಥಾಪಿಸಲಾಗಿತ್ತು ಎಂದರೆ ಸಾಕ್ಷಿ ನನಗೆ ಫ್ಯಾಕ್ಟರಿ ಇರುವ ವಿಚಾರ ಈ ದಾವೆಯನ್ನು ಹೂಡಿದ ನಂತರ ಗೊತ್ತಾಗಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗಾಗಿ ಎ ಎಂ ಜಿ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**